ಬೆಂಗಳೂರು ಡಿಸ್ಟ್ರಿಕ್ಟ್.

ಬೆಂಗಳೂರು ಸಬ್‌ಜಡ್ಜ್‌ರ್‌ಯವರ ಕೋರ್ಟ್‌ನಲ್ಲಿ.

1885ನೇ ಇಸವಿ ಮಿಸಲೇನಿಯಸ್ ನಂಬರ್ 411.

ಮೃತಪಟ್ಟ ಆಯಿತ್ವಾರಪ್ಪನಿಗೆ ಚಿಕ್ಕ ಹೆಂಡತಿ ಮತ್ತು ದತ್ತು ಮಗನಾಗಬೇಕೆಂಬ ಹಕ್ಕುದಾರೀ ಮೇಲೆ ತುಮಕೂರು ಡಿಸ್ಟ್ರಿಕ್ಟ್ ಕೆರಾ ತಾಲ್ಲೂಕು ಪುಲಿಕುಂಟೆ ಸಂಮತು ದ್ವಾರನಕುಂಟೆಯಲ್ಲಿ ಯಿರುವ ಘಾಶೀ ಆಯಿತ್ವಾರಪ್ಪನ ಚಿಕ್ಕಹೆಂಡತಿ ತಿಪ್ಪಮ್ಮ ಈಕೆ ದತ್ತು ಮಗ ರಂಗಂಣ ಸಹು ಸದರೀ ವಾಸಸ್ಥನಾಗಿ ಮೃತಪಟ್ಟ ಆಯಿತ್ವಾರಪ್ಪನ ಮತ್ತು ಈತನ ದೊಡ್ಡಹೆಂಡತಿ ಲಕ್ಕಮ್ಮನ ಜಿಂದಗಿ ಬಗ್ಯಾಗಿ ಬರತಕ್ಕ 500 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಪ್ರಕಾರ ಸರಟಿಫಿಕೇಟ್ ಬಗ್ಯೆ ಈ ಕೋರ್ಟ್‌ಗೆ ಪಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ತಿಪ್ಪಮ್ಮ ರಂಗಂಣ ಇವರ ಅರ್ಜೀಯನ್ನು 1885ನೇ ಇಸವಿ ಅಕ್ಟೋಬರ್ 16ಂಗಳು ತಾರೀಖು 29 ವಲ್ಲು ಕೇಳಿ ಸರ್ಟಿಫಿಕೆಟ್ ಪಡಿಯತಕ್ಕ ಬಾಧ್ಯತೆಯು ವಿಮರ್ಶೆಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಆಯಿತ್ವಾರಪ್ಪ ಮತ್ತು ಲಕ್ಕಮ್ಮ ಇವರ ಆಸ್ತಿಗೆ ಹಕ್ಕುದಾರರಾದ ವಿಪಕ್ಷರೂ ಈ ಕೋರ್ಟ್‌ನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1885ನೇ ಇಸವಿ ಸೆಪ್ಟಂಬರ್ 26ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಂ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸಿ. ಕ್ರೈಸ್,
ಸಬ್ ಜಡ್ಜ್.

ಮೈಸೂರು ಡಿಸ್ಟ್ರಿಕ್ಟ್.

ನಂಬರ್ 7. ತಾರೀಖು 30ನೇ ಸೆಪ್ಟಂಬರ್ 1885.

ಇದರಿಂದ ತಿಳಿಯಪಡಿಸುವದೇನಂದರೆ ತಿರಮಕೂಡ್ಲು ನರಸೀಪುರ ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ದೇವಾರಸಾಗಿ ಬಾಕೀ ಇರತಕ್ಕ ಕೆಳಗೆ ವಿವರಿಸೋಣಾದ ದಸ್ತಾವೇಜುಗಳನ್ನು ಇವಗಳ ಮೋಲೀಕರಾಗಲೀ ಅಥವಾ ಕ್ರಮರೀತ್ಯಾ ಮೊಬ್ತಾರಿ ಹೊಂದಿದ ಮುತಾಲೀಕರಾಗಲಿ ಈ ಲಾಗಾಯಿತು ಒಂದು ತಿಂಗಳವೆಳಗಾ ಸದರೀ ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಹಾಜರಾಗಿ ವಾಪಸ್ ತೆಗದುಕೊಳ್ಳಬಹುದು. ತಪ್ಪಿದರೆ ರಿಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಪ್ರಕಾರ ನಾಶ ಪಡಿಸಲ್ಪಡುವದು.

ದಸ್ತಾವೇಜಿಗಳ ನಂಬರ್.	ದಸ್ತಾವೇಜು ಬರದುಕೊಟ್ಟವರ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜು ಬರಸಿಕೊಂಡವರ ಹೆಸರು ಮತ್ತು ವಾಸಸ್ಥಳ.	ರಿಜಿಸ್ಟ್ರಿಗೆ ಮಾಡಿದಾದ ತಾರೀಖು.	ರಿಜಿಸ್ಟ್ರಿಯ ತಾರೀಖು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು
1883—84 391	ತಿ|| ನರಸೀಪುರ ತಾಲ್ಲೂಕು ಕೆರಹಕು ಕೆರಹಟ್ಟಿ ಗ್ರಾಮದ ದಾಟ್ಟಿ ಗ್ರಾಮದಲ್ಲಿರುವ ನಂದಿಬಲೆ ಹೊಸೂರು ಹುಂಡಿಗೌಡನ ಮಕ್ಕಳು ಬನೊಯಲ್ಲಿರುವ ಪುಟ್ಟಮ್ಮನ ಲಿಂಗೇಗೌಡನ ಹೆಂಡತಿ ಲಿಂಗಮ್ಮ	ಸದರೀ ತಾಲ್ಲೂಕು ಕೆರಹಕು ಕೆರಹಟ್ಟಿ ಗ್ರಾಮದಲ್ಲಿರುವ ನಂದಿಬಲೆ ಹೊಸೂರು ಹುಂಡಿಗೌಡನ ಮಕ್ಕಳು ಲಿಂಗೇಗೌಡ-ಸಂತೂರಯ್ಯ ನಿಗೆ ಸಬ	14ನೇ ಜುಲೈ 1883ನೇ ಇಸವಿ	14ನೇ ಜುಲೈ 1883ನೇ ಇಸವಿ	300 ರೂಪಾಯಿನ ಮನೆ ಕ್ರಯ ಪತ್ರ
1883—84 458	ತಿ|| ನರಸೀಪುರ ತಾಲ್ಲೂಕು ಹೊನಲಲಗೋಡುಗ್ರಾಮ ದಾಖಲೆ ಹಳಿವರ ಹುಂಡಿಯಲ್ಲಿರುವ ಸಿವಾಚಾರದ ಹೊಳ್ಳೇಗೌಡನಪಿದ್ದೇಗೌಡ	ಸದರೀ ತಾಲ್ಲೂಕು ಕಸಬಾ ನರಸೀಪುರದಲ್ಲಿರುವ ಮೊಗೂರು ಸೀನಪ್ಪ	13ನೇ ಆಗಸ್ಟ್ 1883ನೇ ಇಸವಿ	20ನೇ ಆಗಸ್ಟ್ 1883ನೇ ಇಸವಿ	50 ರೂಪಾಯಿನ ಜಮೀ ಆಧಾರ ಪತ್ರ

ಅಬ್ದುಲ್‌ಖಾದರ್, ಕೆ. ಬಿ. ರಜಿಸ್ಟ್ರಾರ್.